# ಹಸ್ತಕ ಮಸ್ತಕ

ಮನುಷ್ಯನ ಇಂದ್ರಿಯಗಳ ವಿಚಾರವಾಗಿ ಹಲವು ರೀತಿಯ ವಾಗ್ವಾದಗಳು ಹಿಂದಿನಿಂದಲೂ ನಡೆದುಕೊಂಡು ಬಂದಿವೆ. ಅವುಗಳಲ್ಲಿ ಕಣ್ಣುಕಿವಿಗಳ ಕುರಿತ ವಿವಾದಗಳಂತೂ ಚರಿತ್ರೆಯ ಉದ್ದಕ್ಕೂ ನಡೆದಿದೆ. ಕಣ್ಣು ಹೆಚ್ಚೋ ಕಿವಿ ಹೆಚ್ಚೋ ಎಂಬಂತಹ ಮಾತುಗಳಲ್ಲಿ 'ಚಕ್ಷುಃ ವೈ ಸತ್ಯಂ' ಎಂದು ಶ್ರುತಿಗಳು ನಿರ್ಣಯಿಸಿದುವು. ಆದರೂ ಈ ಚರ್ಚೆಗಳು ತಾತ್ವಿಕ ನೆಲೆಯಲ್ಲಿ ಇನ್ನೂ ಉಳಿದುಕೊಂಡಿವೆ. ಈ ಸಂಗತಿಯೊಡನೆ ಮಸ್ತಕದ ವಿಚಾರವೂ ಒಂದುಂಟು. ಹಸ್ತಕ್ಕೂ ಮಸ್ತಕಕ್ಕೂ ಒಂದು ಬಗೆಯ ಅವಿನಾಭಾವ ಸಂಬಂಧ ಪೂರ್ವದಿಂದಲೂ ಉಂಟು. ಶರೀರದ ಬಾಹ್ಯಾಂಗಗಳಲ್ಲಿ 'ಹಸ್ತ'ಕ್ಕೆ ಪರಮಪ್ರಾಧಾನ್ಯವೇನೊ ಉಂಟೇ ಉಂಟು. ದೈನಂದಿನ ಕ್ರಿಯೆಗಳಲ್ಲದೆ ಸಾಂಕೇತಿಕ ಕ್ರಿಯೆಗಳಲ್ಲೂ ಹಸ್ತದ ಅಗತ್ಯವಿದೆ. ನಾಟ್ಯದ ಭಾವಗಳನ್ನು ವ್ಯಕ್ತಪಡಿಸುವಾಗ 'ಹಸ್ತ'ದ ಪ್ರಾಮುಖ್ಯತೆಯನ್ನು ಬಿಡುವಂತಿಲ್ಲ. ಹೀಗೆ ದೈನಂದಿನ ಕಲಾಪಗಳಲ್ಲಿಯೂ ಲಲಿತಕಲೆಗಳ ಸಂದರ್ಭಗಳಲ್ಲಿಯೂ 'ಹಸ್ತಕೌಶಲ'ಕ್ಕೆ ಪ್ರಾಧಾನ್ಯ ಇದ್ದೇ ಇದೆ.

'ಹಸ್ತ'ವು ಲೋಕವ್ಯವಹಾರದಲ್ಲಿ ಇದ್ದೇ ತೀರಬೇಕು. ಆದರೆ, ಇವಿಷ್ಟಲ್ಲದೆ, ಅದು 'ಲೋಕಾತೀತ' ಆದದ್ದೂ ಉಂಟು! ದೈವದ ಚಿಹ್ನೆಯಲ್ಲಿ 'ಅಭಯಹಸ್ತ' ಉಂಟಷ್ಟೆ. 'ದೈವ' ಮತ್ತು 'ಗುರು' ಇವರಲ್ಲಿ ಅಭಯಕ್ಕೆ ಉಭಯತರ ಸಂಬಂಧಗಳು ಎಂದಿನಿಂದಲೂ ರೂಢಿಗತವಾಗಿ ಬೆಳೆದುಕೊಂಡು ಬಂದಿವೆ. ದೈವದ ಅನುಗ್ರಹದಲ್ಲಿ 'ಗುರು' ಬದುಕುತ್ತಾನೆ. ಗುರುವಿನ ಅನುಗ್ರಹದಲ್ಲೋ ಅವನ ಅಭಯದಲ್ಲೋ ಶಿಷ್ಯ ಬದುಕುತ್ತಾನೆ. ಹೀಗಾಗಿ, ಭಾರತದ ಅಧ್ಯಾತ್ಮ ಪ್ರಪಂಚದಲ್ಲಿ ಹಸ್ತಕಮಸ್ತಕ ಸಂಯೋಗ ಬಲುಮುಖ್ಯ ಎನಿಸಿದೆ. ಕಾಶ್ಮೀರ ಶೈವದರ್ಶನದಲ್ಲಿ 'ಶಕ್ತಿಪಾತ' ಕ್ರಿಯೆ ಉಂಟು. ಇದು ಅರ್ಹ ಶಿಷ್ಯನಿಗೆ ಗುರು ನೀಡುವ ಪಾರಂಪರಿಕ ಬಳುವಳಿ. ಗುರುವು ಅರ್ಹ ಶಿಷ್ಯನ ತಲೆಯಮೇಲೆ ಹಸ್ತವನ್ನು ಇಟ್ಟು ಪೂರ್ವಪರಂಪರೆಯ ಗುರುಗಳನ್ನೆಲ್ಲಾ ನೆನೆದು, ತನ್ನ ಅಧ್ಯಾತ್ಮಶಕ್ತಿಯನ್ನು ಶಿಷ್ಯನಿಗೆ ಧಾರೆ ಎರೆಯುತ್ತಾನೆ. ಅದು ಶಿಷ್ಯನಲ್ಲಿ ಸಂಪೂರ್ಣವಾಗಿ ಅವತರಣಗೊಳ್ಳುತ್ತದೆ. ಆಗ ಅವನು ಗುರುವಿನ ಸ್ಥಾನಕ್ಕೆ ಏರುತ್ತಾನೆ. ಈ ಕ್ರಿಯೆಯು ಒಮ್ಮೊಮ್ಮೆ ಗುರುವಿನ ದೇಹಾಂತ್ಯಕಾಲದಲ್ಲೂ ನಡೆಯುತ್ತಿತ್ತು. ಭಾರತೀಯ ಶೈವಪರಂಪರೆಯ ಎಲ್ಲಾ ಶಾಖೆಗಳಲ್ಲೂ ಅದರ ಸಂಕೇತಗಳನ್ನು ನಾವು ಕಾಣುತ್ತೇವೆ. ಕರ್ನಾಟಕದ ವೀರಶೈವ ಸಂಪ್ರದಾಯದಲ್ಲಿ 'ಹಸ್ತಕಮಸ್ತಕ ಸಂಯೋಗ' ಗುರುಶಿಷ್ಯರ ನಡುವಣ ಅಭೂತಪೂರ್ವ ಕ್ರಿಯೆಯಾಗಿರುವುದನ್ನು 'ಶೂನ್ಯ ಸಂಪಾದನೆ'ಯಂಥ ಸಂಪಾದನ ಗ್ರಂಥಗಳು ಸೂಕ್ಷ್ಮವಾಗಿ ದಾಖಲಿಸಿವೆ. ಅಲ್ಲಮನು ಅನಿಮಿಷದೇವರಿಂದ ಪಡೆದ ಹಸ್ತಕಮಸ್ತಕ ಸಂಯೋಗ ರಹಸ್ಯಮಯವಾದುದು. ಅಲ್ಲಮನು ಲೋಕವ್ಯಾಪಾರದಿಂದ ಆಲೋಕ ವ್ಯಾಪಾರದ ಕಡೆ ಚಲಿಸುತ್ತಾನೆ. ಅವನು ಕಾಣುತ್ತಿದ್ದ ಲೋಕದ ಮಾಯಾಪರದೆ ಕಳಚಿಕೊಳ್ಳುತ್ತದೆ. ಆ ಜಾಗದಲ್ಲಿ ಹೊಸತೊಂದು ಜಗತ್ತೇ ನಿರ್ಮಾಣಗೊಳ್ಳುತ್ತದೆ. ಅಲ್ಲಮನ ಮಾತಿನಲ್ಲಿ 'ಕುರುಡನು ಕಣ್ತೆರೆದಂತೆ, ಮೂಕನು ಮಾತನಾಡಿದಂತೆ' ಆಗುವ ಅನುಭವ ನಿಜಕ್ಕೂ ರೋಮಾಂಚಕಾರಿಯಾದುದು.

ಹಸ್ತಕಮಸ್ತಕ ಸಂಯೋಗದ ನಡುವೆ ಮೂರ್ತರೂಪಗಳೂ ಉಂಟು; ಅಮೂರ್ತರೂಪಗಳೂ ಉಂಟು! ಅಭಿನವಗುಪ್ತ, ಅಲ್ಲಮಪ್ರಭು ಮುಂತಾದ ಅಧ್ಯಾತ್ಮ ಸಿದ್ಧರಲ್ಲಿ ಇದು ಅಮೂರ್ತತೆಯ ಲೋಕವಾಗಿ ತೆರೆದುಕೊಳ್ಳುತ್ತದೆ. ಆದರೆ, ಸಾಮಾನ್ಯರ ಪಾಡೇನು? ಹೀಗಾಗಿ, ಗುರುಶಿಷ್ಯರಿಬ್ಬರ ನಡುವೆ 'ಪುಸ್ತಕ' ಅಥವ 'ಹೊತ್ತಗೆ' ಇವುಗಳ ನಡುವೆ ಸುಳಿದು ಬಂದಂತೆ ತೋರುತ್ತದೆ. ಕಳೆದ ಅರ್ಧಶತಮಾನದ ಹಿಂದೆ ನಮ್ಮ ಸಮಾಜದಲ್ಲಿ 'ಹೊತ್ತಗೆ'ಯು ದೈವೀಸಂಕೇತವೇ ಆಗಿರುತ್ತಿತ್ತು. ಅದು ತಾಳೋಲೆಯೋ ಕೋರಿಕಾಗದದ್ದೊ ಕೈಬರಹದ್ದೊ ಯಾವುದಾದರೂ ಸರಿ! ಅಧ್ಯಾತ್ಮ ಸಂಪ್ರದಾಯದಲ್ಲಿ ಯಾವುದೂ ಆಗಬಹುದಿತ್ತು. ಅದು ಒಮ್ಮೊಮ್ಮೆ ಗುರುವಿನ ಸಂಕೇತವನ್ನು ಸೂಚಿಸುತ್ತಿತ್ತು. ಮಸ್ತಕವು ಶರೀರದ ಅಂಗಮಾತ್ರವಲ್ಲ; ಅದೊಂದು 'ಮನ್ಮನೋಮಂದಿರ'ವೇ ಹೌದು! ಹೊರನೋಟದ ಕಣ್ಣಿಗೆ ಅದೊಂದು ಮಾಂಸಲ ಭಾಗ. ಆದರೆ, ಅದು ಬೆಳಕಿನ ಮಹಾಪ್ರವಾಹದ ಗುಪ್ತಸ್ಥಾನ.

ಆಧುನಿಕ ಪೂರ್ವ ಭಾರತದಲ್ಲಿ ಹಸ್ತಕ ಮಸ್ತಕ ಸಂಯೋಗ ಕ್ರಿಯೆಯು ಅಧ್ಯಾತ್ಮದ ಪ್ರಭಾವದಲ್ಲಿ ಬದುಕಿತ್ತು. ಇಲ್ಲಿ ಜೀವನವೇ ಬೆಳಕಿನ ಪರ್ವವಾಗಿತ್ತು. 'ಗುರೋಸ್ತು ಮೌನವ್ಯಾಖ್ಯಾನಂ ಶಿಷ್ಯಾಸ್ತು ಛಿನ್ನಸಂಶಯಾಃ' ಕ್ರಿಯೆ ಅಲ್ಲಿ ಸಂಭವಿಸುತ್ತಿತ್ತು. ಒಮ್ಮೆ ಸ್ವಾಮಿ ವಿವೇಕಾನಂದರು, ಹಟ ಮಾಡಿದಾಗ ನಿರ್ವಿಕಲ್ಪಸಮಾಧಿಯಲ್ಲಿ ಕೆಲವು ಗಂಟೆಗಳ ಕಾಲ ಶ್ರೀರಾಮಕೃಷ್ಣಪರಮಹಂಸರು ಅವರನ್ನು ಇರಿಸಿದ್ದರು. ಇಂಥ ಕ್ರಿಯೆಗಳು 'ಹಸ್ತಕಮಸ್ತಕ'ಗಳ ನಡುವಣ ಅಪೂರ್ವ ಅನುಭಾವಿಕ ಸ್ವರೂಪಗಳನ್ನು ತಿಳಿಸುತ್ತವೆ. ನಾವು ಕೇವಲ 'ಭೌತಿಕವಾದಿ'ಗಳಾಗಿ ಇಂದ್ರಿಯ ನಡುವಣ ಜಗತ್ತಿನಲ್ಲಿ ವಿಹರಿಸುತ್ತಿದ್ದೇವೆ. ಆದರೆ, ಇಂದ್ರಿಯ ಲೋಲುಪತೆಯನ್ನು ಕಳೆದುಕೊಂಡಾಗ ಹಸ್ತಕಮಸ್ತಕಕ್ಕೆ ಬೇರೊಂದು ರೀತಿಯ ಮೌಲ್ಯವೇ ಕಾಣಿಸುತ್ತದೆ. ಮಾನುಷತ್ವವು ಬೆರಗಿನಲ್ಲಿ ಓಲಾಡುತ್ತದೆ!

ಸಾಮಾನ್ಯಕ್ರಿಯಾನುಭವಗಳು ಶಿವರೂಪಿ ಕ್ರಿಯೆಗಳಾಗಿ ಬಿಡುತ್ತವೆ, ಲೋಕಾಂತದಲ್ಲಿದ್ದರೂ ಏಕಾಂತದ ಅನುಭವ ಆಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಹಸ್ತಕವು ತನ್ನ ದಿವ್ಯದೈವೀಗುಣವನ್ನು ಕಳೆದುಕೊಳ್ಳುತ್ತಿದೆ. ಪುಸ್ತಕಗಳಾದರೂ ಮುದ್ರಿತಗೊಂಡ ಕೇವಲ ಕಾಗದದ ವಸ್ತುಗಳಾಗುತ್ತಿವೆ. ಹಸ್ತಕ ಮಸ್ತಕದ ನಡುವೆ 'ಮಂತ್ರ'ಸ್ಪರ್ಶತೆಗಳು ಈಗ ಇಲ್ಲವಾಗುತ್ತಿವೆ! ಕಾಲಲಬ್ಧಿಯ ಈ ಚೋದ್ಯಕ್ಕೆ ಏನು ಹೇಳಬೇಕು?

■ ಪುರಂಜೀವಿ

## ಮಾತೇ ಮುತ್ತು

- ಅತಿ ಬುದ್ಧಿವಂತನಿಗೆ ತನ್ನದಾದ ಯಾವ ಅಭಿಪ್ರಾಯವೂ ಇರದು; ಅವನೇ ಅಭಿಪ್ರಾಯಗಳ ಆಳಾಗಿರುತ್ತಾನೆ.
  —ಅಲೆಕ್ಸಾಂಡರ್ ಪೋಪ್
- ಕಾಲ ಮೀರಿದರೆ ಕಾಲವೇ ಕಾರ್ಯದ ಫಲವನ್ನು ಹೀರಿಬಿಡುತ್ತದೆ.
  —ಚಾಣಕ್ಯ
- ಪ್ರಿಯವಾದ ಮಾತನಾಡುವುದರಿಂದ ಎಲ್ಲರಿಗೂ ಸಂತೋಷವಾಗುತ್ತದೆ. ಆದ್ದರಿಂದ ಅದನ್ನೇ ಆಡಬೇಕು. ಮಾತಿಗೇನು ಬಡತನ?
  —ಹಿತೋಪದೇಶ
- ಒಳ್ಳೆಯದನ್ನು ಮಾಡುವ ಗಳಿಗೆಯೇ ಜೀವನದ ಅತಿ ಸಾರ್ಥಕವಾದ ಗಳಿಗೆ.
  —ವರ್ಡ್ಸ್ ವರ್ತ್
- ಪುಸ್ತಕಗಳು ಇನ್ನೂ ಹುಟ್ಟಲಿರುವ ಜನಾಂಗದ ಆಸ್ತಿ.
  —ಜೋಸೆಫ್ ಆಡಿಸನ್
- ಜಾತಿ ಕಲಹಕ್ಕೆ ಕೈಹಾಕದೆ ಎಲ್ಲರೊಂದಿಗೆ ಸಹಬಾಳ್ವೆ ನಡೆಸುವವರೇ ನಿಜವಾದ ಧರ್ಮನಿಷ್ಠರು.
  —ಆನಂದಕಂದ
- ಈಗ ಸದ್ಯ ಇರೋ ಜಾತಿಗಳೆರಡೇ ಎರಡು... ದುಡ್ಡಿರೋವ್ರು, ದುಡ್ಡಿಲ್ಲೋರು ಅಂತ.
  —ಟಿ.ಪಿ. ಕೈಲಾಸಂ
- ಯುದ್ಧವೇ ಪಾಪದ ತವರುಮನೆ.
  —ತ.ರಾ.ಸು.
- ಬದುಕುತ್ತಿರುವವರು ಯಾರೂ ಸಾವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.
  —ಪಿ.ಲಂಕೇಶ್
- ಬಡವರಿಗಿರುವ ಸೌಲಭ್ಯವೇ ನಾಗರಿಕತೆಯ ಅಳತೆಗೋಲು.
  —ಡಾ.ಜಾನ್ಸನ್